# ದಾವಣಗೆರೆ ವಿಶ್ವವಿದ್ಯಾನಿಲಯ

Email:registrarevaluationdvg@gmail.com
ದೂರವಾಣಿ ಸಂ. 08192-508420,104

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ
ಶಿವಗಂಗೋತ್ರಿ, ದಾವಣಗೆರೆ-577 002.

ಸಂ/ದಾವಿ/ಪವಿ/ಆಶಾ/2016-17/

ದಿನಾಂಕ: 20-03-2017

**ಪ್ರಕಟಣೆ**

ವಿಷಯ: ನವೆಂಬರ್/ಡಿಸೆಂಬರ್-2016ರಲ್ಲಿ ನಡೆದ ಬಿ.ಬಿ.ಎಂ./ಬಿ.ಸಿ.ಎ ಪದವಿ (ಸಿಬಿಸಿಎಸ್) ಪ್ರಥಮ ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆ ಮರುಮೌಲ್ಯಮಾಪನ/ಮರುಸಂಕಲನಕ್ಕೆ/ನೋಡುವಿಕೆಗೆ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20-03-2017.

* * * * *

ನವೆಂಬರ್/ಡಿಸೆಂಬರ್-2016ರಲ್ಲಿ ನಡೆದ ಬಿ.ಬಿ.ಎಂ./ಬಿ.ಸಿ.ಎ ಸ್ನಾತಕ ಪದವಿ 2016-17ನೇ ಸಾಲಿನ (ಸಿಬಿಸಿಎಸ್) ಪ್ರಥಮ ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿ/ಮರುಮೌಲ್ಯಮಾಪನ/ಮರುಸಂಕಲನ/ನೋಡುವಿಕೆಗೆ ಅರ್ಜಿ ಸಲ್ಲಿಸಲು ಇಚ್ಛಿಸುವ ವಿದ್ಯಾರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿಮಾಡಿ ಸಂಬಂಧಿಸಿದ ಶುಲ್ಕವನ್ನು ಕಾಲೇಜಿನಲ್ಲಿ ಪಾವತಿಸಬೇಕು. ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಜೆರಾಕ್ಸ್ ಪ್ರತಿ/ಮರುಮೌಲ್ಯಮಾಪನ/ಮರುಸಂಕಲನಕ್ಕೆ ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಒಟ್ಟು ಮೊತ್ತಕ್ಕೆ ಎಸ್.ಬಿ.ಎಂ. ಬ್ಯಾಂಕಿನಿಂದ ಡಿ.ಡಿ.ಯನ್ನು ಪಡೆದು ಅರ್ಜಿಯೊಂದಿಗೆ ಲಗತ್ತಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು. ವಿದ್ಯಾರ್ಥಿಗಳು ವೈಯಕ್ತಿಕವಾಗಿ ತೆಗಿಸಿದ ಡಿ.ಡಿ.ಗಳನ್ನು ವಿಶ್ವವಿದ್ಯಾನಿಲಯವು ಸ್ವೀಕರಿಸುವುದಿಲ್ಲ ಮತ್ತು ಈ ರೀತಿ ಬಂದಲ್ಲಿ ಕಾಲೇಜಿಗೆ ದಂಡ ವಿಧಿಸಲಾಗುವುದು. ಈ ಕಾರಣದಿಂದ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಜೆರಾಕ್ಸ್ ಪ್ರತಿ / ನೋಡುವಿಕೆಗೆ ಕಾಲೇಜಿಗೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 24-03-2017**

**ಮರುಮೌಲ್ಯಮಾಪನ / ಮರುಸಂಕಲನಕ್ಕೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 24-03-2017**

**ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಲಾಗುವುದು.**

| ಕ್ರ.ಸಂ. | ವಿವರ | ನಿಗದಿ ಪಡಿಸಿದ ಶುಲ್ಕದ ಮೊತ್ತ | ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | ಪ್ರಾಂಶುಪಾಲರು ಪದವಿವಾರು ಪಟ್ಟಿಯನ್ನು ದಾ.ವಿ.ವಿ.ಗೆ ಸಲ್ಲಿಸುವ ಕಡೆಯ ದಿನಾಂಕ |
|---|---|---|---|---|
| 6. | ಜೆರಾಕ್ಸ್ ಪ್ರತಿಗೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.535-00 | 24-03-2017 | 28-03-2017 |
| 7. | ಮರು ಸಂಕಲನಕ್ಕೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.230-00 | 24-03-2017 | 28-03-2017 |
| 8. | ಮರು ಮೌಲ್ಯಮಾಪನಕ್ಕೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.325-00 | 24-03-2017 | 28-03-2017 |
| 9. | ಮರು ಮೌಲ್ಯಮಾಪನ ಹಾಗೂ ಉತ್ತರ ಪತ್ರಿಕೆ ನೋಡುವಿಕೆಗೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.560-00 | 24-03-2017 | 28-03-2017 |
| 10. | ಮರು ಸಂಕಲನ /ಮರು ಮೌಲ್ಯಮಾಪನ/ ಉತ್ತರ ಪತ್ರಿಕೆ ನೋಡುವಿಕೆಗೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.785-00 | 24-03-2017 | 28-03-2017 |

ಈ ಸಂಬಂಧ ವಿದ್ಯಾರ್ಥಿಗಳಿಂದ ಸ್ವೀಕೃತವಾದ ಮರುಮೌಲ್ಯಮಾಪನ ಮತ್ತು ಮರುಸಂಕಲನ ಅರ್ಜಿಗಳನ್ನು ಪ್ರಾಂಶುಪಾಲರು ಪದವಿವಾರು ಪರಿಶೀಲಿಸಿ ಅವುಗಳನ್ನು ಪ್ರತ್ಯೇಕಿಸಿ (ಉದಾ: ಬಿ.ಬಿ.ಎಂ. ಗೆ ಬೇರೆ / ಬಿ.ಸಿ.ಎ. ಗೆ ಬೇರೆ ಇತ್ಯಾದಿ) ಕ್ರೋಢೀಕರಿಸಿದ ಪಟ್ಟಿಯನ್ನು ದ್ವಿಪ್ರತಿಯಲ್ಲಿ ದಿನಾಂಕ: **28-03-2017**ರೊಳಗಾಗಿ ಕುಲಸಚಿವರು(ಪರೀಕ್ಷಾಂಗ) ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-**577 002** ಇವರಿಗೆ ಸಲ್ಲಿಸತಕ್ಕದ್ದು.

**ಜೆರಾಕ್ಸ್ ಪ್ರತಿ ಮತ್ತು ಉತ್ತರ ಪತ್ರಿಕೆ ನೋಡುವ ದಿನಾಂಕ: 03-04-2017 ಸಮಯ ಬೆಳಿಗ್ಗೆ 11.00 ರಿಂದ ಸಂಜೆ 5.00ರ ವರೆಗೆ**

**ಸ್ಥಳ: ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.**

***ಜೆರಾಕ್ಸ್ ಪ್ರತಿ ಪಡೆದ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು***

***ಅಂತಿಮ ದಿನಾಂಕ: 04-04-2017 ಆಗಿರುತ್ತದೆ.***

**ಸೂಚನೆಗಳು:-**

1. ವಿದ್ಯಾರ್ಥಿಗಳಿಗೆ ಮರು ಸಂಕಲನ /ಮರು ಮೌಲ್ಯಮಾಪನ ಹಾಗೂ ಉತ್ತರ ಪತ್ರಿಕೆ ನೋಡುವಿಕೆಗೆ ಅವಕಾಶವಿದೆ.
2. ಪಾವತಿಸಬೇಕಾದ ಒಟ್ಟು ಶುಲ್ಕಕ್ಕೆ ಡಿ.ಡಿ.ಯನ್ನು ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ದಾ.ವಿ.ವಿ. ಬ್ರಾಂಚ್) ದಾವಣಗೆರೆ ಇಲ್ಲಿಗೆ ಸಂದಾಯವಾಗುವಂತೆ ಪಡೆಯಬೇಕು. ನಿಗದಿತ ಶುಲ್ಕಕ್ಕೆ ವಿದ್ಯಾರ್ಥಿಗಳಿಂದ ನಗದಾಗಿ ಹಣ ಪಾವತಿಸಿಕೊಂಡು ನಂತರ ಕಡೇ ದಿನಾಂಕದಂದು ಒಟ್ಟು ಮೊತ್ತಕ್ಕೆ ಡಿ.ಡಿ. ಪಡೆದು ಕಳುಹಿಸಲು ಪ್ರಾಂಶುಪಾಲರಿಗೆ ಸೂಚಿಸಲಾಗಿದೆ. ಅಥವಾ ನಿಗದಿಪಡಿಸಿದ ದಿನಾಂಕದಂದು ಡಿಡಿ/ಚಲನ್ ನೊಂದಿಗೆ ಶುಲ್ಕ ಜಮಾ ಮಾಡಲು ಆಗದಿದ್ದಲ್ಲಿ, ಆ ದಿನವೇ ಯಾವುದೇ ಬ್ಯಾಂಕಿನಿಂದ RTGS/ NEFT ಮೂಲಕ ವಿಶ್ವವಿದ್ಯಾನಿಲಯದ ಖಾತೆ ಸಂಖ್ಯೆ **64050447124 (IFSC-Code SBMY0040869)** ಗೆ ಜಮಾ ಮಾಡಲು ತಿಳಿಸಲಾಗಿದೆ. ಹೀಗೆ ಜಮಾ ಮಾಡಿದ ಶುಲ್ಕದ ವಿವರದ ಒಂದು ಪ್ರತಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಹಾಗೂ ಒಂದು ಪ್ರತಿಯನ್ನು ಹಣಕಾಸು ವಿಭಾಗಕ್ಕೆ ಕಡ್ಡಾಯವಾಗಿ ಕಳುಹಿಸತಕ್ಕದ್ದು.

3. ವಿದ್ಯಾರ್ಥಿಗಳು ಖುದ್ದಾಗಿ ಬಂದು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಜೆರಾಕ್ಸ್ ಪ್ರತಿಯನ್ನು ಪಡೆಯಲು ಮತ್ತು ಉತ್ತರ ಪತ್ರಿಕೆಯನ್ನು ನೋಡಲು ಕಾಲೇಜಿನಿಂದ ಪಡೆದಿರುವ ಗುರುತಿನ ಚೀಟಿಯನ್ನು (Identity Card)ಮತ್ತು ಸ್ವೀಕೃತಿಯನ್ನು ಕಡ್ಡಾಯವಾಗಿ ತೋರಿಸತಕ್ಕದ್ದು.
4. ಪಾಸು ಮಾಡಿದ ವಿಷಯಕ್ಕೆ ಒಮ್ಮೆ ಅರ್ಜಿ ಹಾಕಿದಲ್ಲಿ ಮರು ಮೌಲ್ಯಮಾಪನಗೊಂಡ ಬಳಿಕ ಪಡೆದ ಅಂಕಗಳೇ ಅಂತಿಮವೆಂದು ತಿಳಿಯತಕ್ಕದ್ದು.
5. ಅಭ್ಯರ್ಥಿಗಳು ಅರ್ಜಿಯಲ್ಲಿ ನೊಂದಣಿ ಸಂಖ್ಯೆ, ಪತ್ರಿಕೆಯ ಹೆಸರು, ಕೋಡ್ ಸಂಖ್ಯೆ- ಇವುಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಸೈದ್ಧಾಂತಿಕ ಪತ್ರಿಕೆಯ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದಾಗ ಸೈದ್ಧಾಂತಿಕ ಪತ್ರಿಕೆಯಲ್ಲಿ ಪಡೆದ ಅಂಕಗಳನ್ನು ಮಾತ್ರ ನಮೂದಿಸಬೇಕು. ಪ್ರಾಯೋಗಿಕ ಪರೀಕ್ಷೆಗೆ ಮರುಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಅರ್ಜಿ ನಮೂನೆಯನ್ನು ನೋಡಬಹುದು.
6. ***ಈ ಪ್ರಕಟಣೆಯೊಂದಿಗೆ ಲಗತ್ತಿಸಿರುವ ಅನುಬಂಧ-1ರ ನಮೂನೆಯಂತೆ XL Formatನ್ನು CDಯಲ್ಲಿ ತಯಾರಿಸಿ (Course wise & Semester wise ಪ್ರತ್ಯೇಕವಾಗಿ) ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ, ಹೆಸರು, ವಿಷಯಗಳನ್ನು ನಮೂದಿಸಿ ಪ್ರಾಂಶುಪಾಲರು ಕ್ರೊಡೀಕರಿಸಿದ ಮಾಹಿತಿಯನ್ನು ಮತ್ತು ಅರ್ಜಿಗಳನ್ನು ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-577 002. ಇವರಿಗೆ ದಿನಾಂಕ: 28-03-2017ರಂದು ಸಂಜೆ 5.00ರೊಳಗಾಗಿ ಖುದ್ದಾಗಿ ಸಲ್ಲಿಸಲು ಸೂಚಿಸಲಾಗಿದೆ. ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.***
7. ಅಭ್ಯರ್ಥಿಯು ಉತ್ತರ ಪತ್ರಿಕೆ ನೋಡುವಿಕೆಗೆ (seeing) ಒಂದಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
8. ಉತ್ತರ ಪತ್ರಿಕೆ ಮರುಮೌಲ್ಯಮಾಪನ/ಮರು ಸಂಕಲನಕ್ಕೆ/ ವೀಕ್ಷಣೆಗೆ ಅರ್ಜಿಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ್ಜಾಲ www.davangereuniversity.ac.in ನಲ್ಲಿ ಪಕಟಗೊಳಿಸಲಾಗಿದೆ.

20/03

ಕುಲಸಚಿವರು(ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577 002

ಗೆ,
ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಪದವಿ ಕಾಲೇಜುಗಳ (ಬಿ.ಬಿ.ಎಂ./ಬಿ.ಸಿ.ಎ.) ಪ್ರಾಂಶುಪಾಲರುಗಳಿಗೆ - ಇದನ್ನು ವಿದ್ಯಾರ್ಥಿಗಳ ಮಾಹಿತಿಗಾಗಿ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ಈ ಸಂಬಂಧ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಪ್ರತಿ:

1. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-02.
2. ಆಪ್ತಶಾಖೆ, ಮಾನ್ಯ ಕುಲಪತಿಗಳು/ಕುಲಸಚಿವರು(ಆಡಳಿತ) ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-02.
3. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

Email:registrarevaluationdvg@gmail.com
ದೂರವಾಣಿ ಸಂ. 08192-508420,104

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ
ಶಿವಗಂಗೋತ್ರಿ, ದಾವಣಗೆರೆ-577 002.

ಸಂ/ದಾವಿ/ಪವಿ/ಆಶಾ/2016-17/

ದಿನಾಂಕ: 20-03-2017

## ಪ್ರಕಟಣೆ

ವಿಷಯ: ನವೆಂಬರ್/ಡಿಸೆಂಬರ್-2016ರಲ್ಲಿ ನಡೆದ ಬಿ.ಎ./ಬಿ.ಎಸ್ಸಿ/ಬಿ.ಕಾಂ/ಬಿ.ಎಸ್.ಎ/ ಬಿ.ಎಸ್.ಡಬ್ಲ್ಯೂ(ಬಿ.ಎಸ್.ಡಬ್ಲ್ಯೂ 1 ರಿಂದ 6ನೇ ಸೆಮಿಸ್ಟರ್ ವರೆಗೆ) ಪದವಿ (ಸಿಬಿಸಿಎಸ್) ಪ್ರಥಮ ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆ ಮರುಮೌಲ್ಯಮಾಪನ/ಮರುಸಂಕಲನಕ್ಕೆ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 20-03-2017

* * * * *

ನವೆಂಬರ್/ಡಿಸೆಂಬರ್-2016ರಲ್ಲಿ ನಡೆದ ಬಿ.ಎ./ಬಿ.ಎಸ್ಸಿ/ಬಿ.ಕಾಂ/ಬಿ.ಎಸ್.ಎ/ಬಿ.ಎಸ್.ಡಬ್ಲ್ಯೂ ಸ್ನಾತಕ ಪದವಿ 2016-17ನೇ ಸಾಲಿನ ಸಿ.ಬಿ.ಸಿ.ಎಸ್ ಪಠ್ಯಕ್ರಮದ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿ/ಮರುಮೌಲ್ಯಮಾಪನ/ಮರುಸಂಕಲನಕ್ಕೆ ಅರ್ಜಿ ಸಲ್ಲಿಸಲು ಇಚ್ಛಿಸುವ ವಿದ್ಯಾರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿಮಾಡಿ ಸಂಬಂಧಿಸಿದ ಶುಲ್ಕವನ್ನು ಕಾಲೇಜಿನಲ್ಲಿ ಪಾವತಿಸಬೇಕು. ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಜೆರಾಕ್ಸ್ ಪ್ರತಿ/ಮರುಮೌಲ್ಯಮಾಪನ/ಮರುಸಂಕಲನಕ್ಕೆ ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಒಟ್ಟು ಮೊತ್ತಕ್ಕೆ ಎಸ್.ಬಿ.ಎಂ. ಬ್ಯಾಂಕಿನಿಂದ ಡಿ.ಡಿ.ಯನ್ನು ಪಡೆದು ಅರ್ಜಿಯೊಂದಿಗೆ ಲಗತ್ತಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು. ವಿದ್ಯಾರ್ಥಿಗಳು ವೈಯಕ್ತಿಕವಾಗಿ ತೆಗೆಸಿದ ಡಿ.ಡಿ.ಗಳನ್ನು ವಿಶ್ವವಿದ್ಯಾನಿಲಯವು ಸ್ವೀಕರಿಸುವುದಿಲ್ಲ ಮತ್ತು ಈ ರೀತಿ ಬಂದಲ್ಲಿ ಕಾಲೇಜಿಗೆ ದಂಡ ವಿಧಿಸಲಾಗುವುದು. ಈ ಕಾರಣದಿಂದ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಜೆರಾಕ್ಸ್ ಪ್ರತಿಗೆ ಕಾಲೇಜಿಗೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 24-03-2017**

**ಮರುಮೌಲ್ಯಮಾಪನ / ಮರುಸಂಕಲನಕ್ಕೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 24-03-2017**

**ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಲಾಗುವುದು.**

| ಕ್ರ.ಸಂ. | ವಿವರ | ನಿಗಧಿ ಪಡಿಸಿದ ಶುಲ್ಕದ ಮೊತ್ತ | ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | ಪ್ರಾಂಶುಪಾಲರು ಪದವಿವಾರು ಪಟ್ಟಿಯನ್ನು ದಾ.ವಿ.ವಿ.ಗೆ ಸಲ್ಲಿಸುವ ಕಡೆಯ ದಿನಾಂಕ |
|---|---|---|---|---|
| 5. | ಜೆರಾಕ್ಸ್ ಪ್ರತಿಗೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.535-00 | 24-03-2017 | 28-03-2017 |
| 6. | ಮರು ಸಂಕಲನಕ್ಕೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.165-00 | 24-03-2017 | 28-03-2017 |
| 7. | ಮರು ಮೌಲ್ಯಮಾಪನಕ್ಕೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.230-00 | 24-03-2017 | 28-03-2017 |
| 8. | ಮರು ಸಂಕಲನ, ಮರು ಮೌಲ್ಯಮಾಪನ ಎರಡಕ್ಕೂ (ಪ್ರತಿ ಉತ್ತರ ಪತ್ರಿಕೆಗೆ) | ರೂ.395-00 | 24-03-2017 | 28-03-2017 |

ಈ ಸಂಬಂಧ ವಿದ್ಯಾರ್ಥಿಗಳಿಂದ ಸ್ವೀಕೃತವಾದ ಮರುಮೌಲ್ಯಮಾಪನ ಮತ್ತು ಮರುಸಂಕಲನ ಅರ್ಜಿಗಳನ್ನು ಪ್ರಾಂಶುಪಾಲರು ಪದವಿವಾರು ಪರಿಶೀಲಿಸಿ ಅವುಗಳನ್ನು ಪ್ರತ್ಯೇಕಿಸಿ (ಉದಾ: ಬಿ.ಎ. ಗೆ ಬೇರೆ / ಬಿ.ಎಸ್ಸಿ ಗೆ ಬೇರೆ ಇತ್ಯಾದಿ) ಕ್ರೋಢೀಕರಿಸಿದ ಪಟ್ಟಿಯನ್ನು ದ್ವಿಪ್ರತಿಯಲ್ಲಿ ದಿನಾಂಕ: **28-03-2017**ರೊಳಗಾಗಿ ಕುಲಸಚಿವರು(ಪರೀಕ್ಷಾಂಗ) ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-577 002 ಇವರಿಗೆ ಸಲ್ಲಿಸತಕ್ಕದ್ದು.

**ಜೆರಾಕ್ಸ್ ಪ್ರತಿ ಕೊಡುವ ದಿನಾಂಕ: 03-04-2017 ಸಮಯ ಬೆಳಿಗ್ಗೆ 11.00 ರಿಂದ ಸಂಜೆ 5.00ರ ವರೆಗೆ**

**ಸ್ಥಳ: ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.**

***ಜೆರಾಕ್ಸ್ ಪ್ರತಿ ಪಡೆದ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: 04-04-2017 ಆಗಿರುತ್ತದೆ.***

ಸೂಚನೆಗಳು:-

1. ಪಾವತಿಸಬೇಕಾದ ಒಟ್ಟು ಶುಲ್ಕಕ್ಕೆ ಡಿ.ಡಿ.ಯನ್ನು ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ದಾ.ವಿ.ವಿ. ಬ್ರಾಂಚ್) ದಾವಣಗೆರೆ ಇಲ್ಲಿಗೆ ಸಂದಾಯವಾಗುವಂತೆ ಪಡೆಯಬೇಕು. ನಿಗದಿತ ಶುಲ್ಕಕ್ಕೆ ವಿದ್ಯಾರ್ಥಿಗಳಿಂದ ನಗದಾಗಿ ಹಣ ಪಾವತಿಸಿಕೊಂಡು ನಂತರ ಕಡೇ ದಿನಾಂಕದಂದು ಒಟ್ಟು ಮೊತ್ತಕ್ಕೆ ಡಿ.ಡಿ. ಪಡೆದು ಕಳುಹಿಸಲು ಪ್ರಾಂಶುಪಾಲರಿಗೆ ಸೂಚಿಸಲಾಗಿದೆ. ಅಥವಾ ನಿಗದಿಪಡಿಸಿದ ದಿನಾಂಕದಂದು ಡಿಡಿ/ಚಲನ್ ನೊಂದಿಗೆ ಶುಲ್ಕ ಜಮಾ ಮಾಡಲು ಆಗದಿದ್ದಲ್ಲಿ, ಆ ದಿನವೇ ಯಾವುದೇ ಬ್ಯಾಂಕಿನಿಂದ RTGS/ NEFT ಮೂಲಕ ವಿಶ್ವವಿದ್ಯಾನಿಲಯದ ಖಾತೆ ಸಂಖ್ಯೆ **64050447124 (IFSC-Code SBMY0040869)** ಗೆ ಜಮಾ ಮಾಡಲು ತಿಳಿಸಲಾಗಿದೆ. ಹೀಗೆ ಜಮಾ ಮಾಡಿದ ಶುಲ್ಕದ ವಿವರದ ಒಂದು ಪ್ರತಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಹಾಗೂ ಒಂದು ಪ್ರತಿಯನ್ನು ಹಣಕಾಸು ವಿಭಾಗಕ್ಕೆ ಕಡ್ಡಾಯವಾಗಿ ಕಳುಹಿಸತಕ್ಕದ್ದು.
2. ವಿದ್ಯಾರ್ಥಿಗಳು ಖುದ್ದಾಗಿ ಬಂದು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಜೆರಾಕ್ಸ್ ಪ್ರತಿಯನ್ನು ಪಡೆಯತಕ್ಕದ್ದು ಮತ್ತು ಕಾಲೇಜಿನಿಂದ ಪಡೆದಿರುವ ಗುರುತಿನ ಚೀಟಿಯನ್ನು (Identity Card) ಮತ್ತು ಸ್ವೀಕೃತಿಯನ್ನು ಕಡ್ಡಾಯವಾಗಿ ತೋರಿಸತಕ್ಕದ್ದು.
3. ಪಾಸು ಮಾಡಿದ ವಿಷಯಕ್ಕೆ ಒಮ್ಮೆ ಅರ್ಜಿ ಹಾಕಿದಲ್ಲಿ ಮರು ಮೌಲ್ಯಮಾಪನಗೊಂಡ ಬಳಿಕ ಪಡೆದ ಅಂಕಗಳೇ ಅಂತಿಮವೆಂದು ತಿಳಿಯತಕ್ಕದ್ದು.

ಪು.ತಿ.ನೋ.

4. ಅಭ್ಯರ್ಥಿಗಳು ಅರ್ಜಿಯಲ್ಲಿ ನೊಂದಣಿ ಸಂಖ್ಯೆ, ಪತ್ರಿಕೆಯ ಹೆಸರು, ಕೋಡ್ ಸಂಖ್ಯೆ- ಇವುಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಸೈದ್ಧಾಂತಿಕ ಪತ್ರಿಕೆಯ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದಾಗ ಸೈದ್ಧಾಂತಿಕ ಪತ್ರಿಕೆಯಲ್ಲಿ ಪಡೆದ ಅಂಕಗಳನ್ನು ಮಾತ್ರ ನಮೂದಿಸಬೇಕು. ಪ್ರಾಯೋಗಿಕ ಪರೀಕ್ಷೆಗೆ ಮರುಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಅರ್ಜಿ ನಮೂನೆಯನ್ನು ನೋಡಬಹುದು.
5. *ಈ ಪ್ರಕಟಣೆಯೊಂದಿಗೆ ಲಗತ್ತಿಸಿರುವ ಅನುಬಂಧ-1ರ ನಮೂನೆಯಂತೆ XL Formatನ್ನು CDಯಲ್ಲಿ ತಯಾರಿಸಿ (Course wise & Semester wise ಪ್ರತ್ಯೇಕವಾಗಿ) ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ, ಹೆಸರು, ವಿಷಯಗಳನ್ನು ನಮೂದಿಸಿ ಪ್ರಾಂಶುಪಾಲರು ಕ್ರೋಢೀಕರಿಸಿದ ಮಾಹಿತಿಯನ್ನು ಮತ್ತು ಅರ್ಜಿಗಳನ್ನು ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-577 002. ಇವರಿಗೆ ದಿನಾಂಕ: 28-03-2017ರಂದು ಸಂಜೆ 5.00ರೊಳಗಾಗಿ ಖುದ್ದಾಗಿ ಸಲ್ಲಿಸಲು ಸೂಚಿಸಲಾಗಿದೆ. ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.*
6. ಉತ್ತರ ಪತ್ರಿಕೆ ಮರುಮೌಲ್ಯಮಾಪನ/ಮರು ಸಂಕಲನಕ್ಕೆ ವೀಕ್ಷಣೆಗೆ ಅರ್ಜಿಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ್ಜಾಲ www.davangereuniversity.ac.in ನಲ್ಲಿ ಪ್ರಕಟಗೊಳಿಸಲಾಗಿದೆ.

ಸಹಿ/- 20/03
ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ - 577 002

ಗೆ,

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಪದವಿ ಕಾಲೇಜುಗಳ (ಬಿ.ಎ./ಬಿ.ಎಸ್ಸಿ/ಬಿ.ಕಾಂ/ಬಿ.ಎಸ್.ಎ/ಬಿ.ಎಸ್.ಡಬ್ಲ್ಯೂ) ಪ್ರಾಂಶುಪಾಲರುಗಳಿಗೆ - ಇದನ್ನು ವಿದ್ಯಾರ್ಥಿಗಳ ಮಾಹಿತಿಗಾಗಿ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ಈ ಸಂಬಂಧ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಪ್ರತಿ:

1. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-02.
2. ಆಪ್ತಶಾಖೆ, ಮಾನ್ಯ ಕುಲಪತಿಗಳು/ಕುಲಸಚಿವರು(ಆಡಳಿತ) ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-02.
3. ಕಛೇರಿ ಪ್ರತಿ.